# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ. : 858 (950)
ಮಾನ್ಯ ಸದಸ್ಯರ ಹೆಸರು : ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 20-08-2025
ಉತ್ತರಿಸುವ ಸಚಿವರು : ಲೋಕೋಪಯೋಗಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಾಗರ ತಾಲ್ಲೂಕು ಹಸಿರುಮಕ್ಕಿ ಬಳಿ ಶರಾವತಿ ಹಿನ್ನೀರಿಗೆ ಕೆ.ಆರ್.ಡಿ.ಸಿ.ಎಲ್. ವತಿಯಿಂದ ಹಸಿರುಮಕ್ಕಿ ಸೇತುವೆ ನಿರ್ಮಾಣ ಮಾಡಲು ಮಂಜೂರಾದ ದಿನಾಂಕ ಯಾವುದು; ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು; (ಮಂಜೂರಾತಿ ಆದೇಶದ ಪೂರ್ಣ ವಿವರ ಒದಗಿಸುವುದು) | ಸಾಗರ ತಾಲ್ಲೂಕು ಹಸಿರುಮಕ್ಕಿ ಬಳಿ ಶರಾವತಿ ಹಿನ್ನೀರಿಗೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ರೂ.87.53 ಕೋಟಿ ಅಂದಾಜು ಮೊತ್ತದಲ್ಲಿ ಸೇತುವೆ ನಿರ್ಮಿಸಲು ದಿನಾಂಕ:31-01-2017 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಮಂಜೂರಾತಿ ಆದೇಶದ ಪ್ರತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. ಕಾಮಗಾರಿಯ ಗುತ್ತಿಗೆ ಮೊತ್ತವು ರೂ.115.60 ಕೋಟಿಗಳಾಗಿದ್ದು ಪ್ರಸ್ತುತ ಸದರಿ ಸೇತುವೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು, ಫೆಬ್ರವರಿ-2026 ರೊಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು. |
| ಆ) | ಸೇತುವೆ ನಿರ್ಮಾಣಕ್ಕೆ ಮಂಜೂರಾದ ಅನುದಾನವೆಷ್ಟು; (ವಿವರ ಒದಗಿಸುವುದು) | ಪ್ರಸ್ತಾಪಿತ ಸೇತುವೆ ನಿರ್ಮಾಣ ಕಾಮಗಾರಿಯನ್ನು ರೂ.87.53 ಕೋಟಿ ಅಂದಾಜು ಮೊತ್ತದಲ್ಲಿ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. |
| ಇ) | ಅನುದಾನವನ್ನು ಹೆಚ್ಚಿಸಿದ ಮೊತ್ತವೆಷ್ಟು; (ಅನುದಾನ ಹೆಚ್ಚಿಸಿದ ದಿನಾಂಕ, ಹೆಚ್ಚುವರಿ ಮೊತ್ತಗಳನ್ನು ನೀಡಿದ ಪೂರ್ಣ ವಿವರ ಒದಗಿಸುವುದು) | 2019 ರಲ್ಲಿ ಉಂಟಾದ ಅನಿರೀಕ್ಷಿತ ಭಾರಿ ಪ್ರವಾಹದ ಪರಿಣಾಮವಾಗಿ ನದಿಯಲ್ಲಿ ಹರಿದ ಹೆಚ್ಚಿನ ನೀರಿನ ಮಟ್ಟಕ್ಕೆ ಅನುಗುಣವಾಗಿ ಸದರಿ ಸೇತುವೆಯ ಮೂಲ ವಿನ್ಯಾಸ ಮಾರ್ಪಾಡಿಸಲಾಗಿರುತ್ತದೆ. ಇದರಿಂದಾಗಿ ಕಾಮಗಾರಿಯ ಸಂಭವನೀಯ ಪರಿಷ್ಕೃತ ಅಂದಾಜು ಮೊತ್ತವು ರೂ.125.67 ಕೋಟಿಗಳಾಗಿರುತ್ತದೆ. ಮೇಲ್ಕಂಡ ಸೇತುವೆ ನಿರ್ಮಾಣ ಕಾಮಗಾರಿಯ ಪರಿಷ್ಕೃತ ಅಂದಾಜು ಒಳಗೊಂಡಂತೆ ಸರ್ಕಾರದ ಆದೇಶ ಸಂಖ್ಯೆ: ಲೋ.ಇ 34 ಇಎಪಿ 2014, ದಿನಾಂಕ:31-01-2017 ರಲ್ಲಿ ಅನುಮೋದನೆ ನೀಡಲಾಗಿರುವ ಎಲ್ಲಾ ಸೇತುವೆ ನಿರ್ಮಾಣ ಕಾಮಗಾರಿಗಳನ್ನು ಒಳಗೊಂಡಂತೆ ಸಮಗ್ರ ಪರಿಷ್ಕೃತ ಅಂದಾಜಿಗೆ ಸಹಮತಿ ಕೋರಿ ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದ್ದ ಪ್ರಸ್ತಾವನೆಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯು ಹೆಚ್ಚುವರಿ ಆರ್ಥಿಕ ಹೊರೆಯಾಗಲು ಕಾರಣರಾಗಿರುವವರ ವಿರುದ್ಧ ಜವಬ್ದಾರಿ ನಿಗದಿಪಡಿಸಿ ಶಿಸ್ತುಕ್ರಮ ಜರುಗಿಸಲು ಸ್ವತಂತ್ರ ಹಾಗೂ ಸರ್ಕಾರೇತರ ನಿಪುಣ ತಾಂತ್ರಿಕ ಸಮಿತಿಯನ್ನು ರಚಿಸುವಂತೆ ತಿಳಿಸಿದ್ದು, ಈ ಕುರಿತು ಸಮಿತಿ ರಚಿಸಲು ಕ್ರಮವಹಿಸಲಾಗಿರುತ್ತದೆ. ಪರಿಷ್ಕೃತ ಅಂದಾಜು ಪ್ರಸ್ತಾವನೆ ಅನುಮೋದನೆಯಾದಂತೆ ಹೆಚ್ಚುವರಿ ಕಾಮಗಾರಿಗಳಿಗೆ ಅಗತ್ಯವಿರುವ ಅನುದಾನ ಬಿಡುಗಡೆ ಮಾಡಲಾಗುವುದು. |
| ಈ) | ಸದರಿ ಸೇತುವೆಗೆ ಸರ್ಕಾರದಿಂದ ಈವರೆಗೆ ಬಿಡುಗಡೆಯಾದ ಮೊತ್ತ ಮತ್ತು ಬಿಡುಗಡೆ ಮಾಡಬೇಕಾದ ಮೊತ್ತವೆಷ್ಟು; | ಪ್ರಸ್ತಾಪಿತ ಸೇತುವೆ ನಿರ್ಮಾಣ ಕಾಮಗಾರಿಗೆ ಇಲ್ಲಿಯವರೆಗೆ ರೂ.100.58 ಕೋಟಿ ಮೊತ್ತ ಬಿಡುಗಡೆಯಾಗಿರುತ್ತದೆ. ಕಾಮಗಾರಿಯ ಪ್ರಗತಿಗನುಗುಣವಾಗಿ ಅನುದಾನ ಬಿಡಗಡೆ ಮಾಡಲಾಗುತ್ತಿದೆ. |

| | | |
|---|---|---|
| ಉ) | ಯಾವ ಯಾವ ದಿನಾಂಕದಂದು ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ; (ಸರ್ಕಾರದಿಂದ ಬಿಡುಗಡೆ ಮಾಡಿದ ಮೊತ್ತವಾರು ದಿನಾಂಕವಾರು ಪೂರ್ಣ ವಿವರ ಒದಗಿಸುವುದು) | ಸರ್ಕಾರದಿಂದ ಕಾಮಗಾರಿವಾರು ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ. ಲೆಕ್ಕಶೀರ್ಷಿಕೆವಾರು ಅನುದಾನ ಬಿಡುಗಡೆ ಮಾಡಲಾಗುವುದು. ಕಾಮಗಾರಿಯ ಪ್ರಗತಿಗನುಗುಣವಾಗಿ ಬಿಲ್ ಪಾವತಿಸಲಾಗುವುದು. |
| ಊ) | ಈ ಸೇತುವೆಯನ್ನು ಪೂರ್ಣಗೊಳಿಸಲು ತಗಲುವ ವೆಚ್ಚ ಎಷ್ಟು; (ವಿವರ ಒದಗಿಸುವುದು) | ವಿನ್ಯಾಸ ಬದಲಾವಣೆಯಿಂದ ಸೇತುವೆ ನಿರ್ಮಾಣ ಕಾಮಗಾರಿಯ ಸಂಭವನೀಯ ಪರಿಷ್ಕೃತ ಅಂದಾಜು ಮೊತ್ತವು ರೂ.125.67 ಕೋಟಿಗಳಾಗಿರುತ್ತದೆ. |
| ಋ) | ಕಾಮಗಾರಿಯ ವಿಳಂಬಕ್ಕೆ ಕಾರಣಗಳೇನು? (ಪೂರ್ಣ ವಿವರ ಒದಗಿಸುವುದು) | 1. ಸೇತುವೆ ನಿರ್ಮಾಣ ಕಾಮಗಾರಿಗೆ ಕಾರ್ಯಾದೇಶ ನೀಡಿದ ನಂತರದಲ್ಲಿ 2018ರ ವಿಧಾನಸಭಾ ಚುನಾವಣೆಗಳು ಘೋಷಣೆಯಾದ ಹಿನ್ನೆಲೆಯಲ್ಲಿ ನೀತಿ ಸಂಹಿತೆಯ ಕಾರಣದಿಂದ ಕೂಡಲೇ ಕಾಮಗಾರಿ ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ. ತದನಂತರ ಮೇ–2019ರ ಸಾರ್ವತ್ರಿಕ ಲೋಕಸಭಾ ಚುನಾವಣೆಯ ನೀತಿ ಸಂಹಿತೆಯ ಕಾರಣದಿಂದ ಸೇತುವೆಯ ಪ್ರಾರಂಭಿಕ ಸರ್ವೆ ಕಾರ್ಯ, ಮಣ್ಣಿನ ಪರೀಕ್ಷೆ ಕಾಮಗಾರಿಗಳು ಕೈಗೊಳ್ಳುವಲ್ಲಿ ವಿಳಂಬವಾಗಿರುತ್ತದೆ.<br>2. ಪ್ರಾರಂಭಿಕ ಹಂತದ ಜಿಯೋಟೆಕ್ನಿಕಲ್ ಇನ್‌ವೆಸ್ಟಿಗೇಷನ್ (Geo Technical Investigation) ಮತ್ತು ಹೈಡ್ರಾಲಿಕ್ ಸರ್ವೆ (Hydraulic survey) ಸಮಯದಲ್ಲಿ ನೀರಿನ ಮಟ್ಟವು ಹೆಚ್ಚಾಗಿದ್ದುದರಿಂದ, ನಕ್ಷೆ ಮತ್ತು ವಿನ್ಯಾಸ ತಯಾರಿಸುವ ಕೆಲಸವು ವಿಳಂಬವಾಗಿರುತ್ತದೆ.<br>3. ಸದರಿ ಸೇತುವೆ ಕಾಮಗಾರಿಯನ್ನು ಲಿಂಗನಮಕ್ಕಿ ಜಲಾಶಯದ ಹಿನ್ನೀರಿನಲ್ಲಿ ಕೈಗೊಳ್ಳಲಾಗಿದ್ದು, ಜಲಾಶಯದ ನೀರಿನ ಮಟ್ಟವು ವರ್ಷದಲ್ಲಿ 6 ರಿಂದ 8 ತಿಂಗಳುಗಳ ಕಾಲ ಹೆಚ್ಚಿನ ಮಟ್ಟದಲ್ಲಿರುವುದರಿಂದ ನಿರ್ಮಾಣ ಕಾಮಗಾರಿಗೆ ವರ್ಷದಲ್ಲಿ 4 ರಿಂದ 5 ತಿಂಗಳುಗಳ ಅವಧಿ ಮಾತ್ರ ಲಭ್ಯವಾಗುತ್ತದೆ.<br>4. 2019 ಹಾಗೂ 2020ರ ಮಳೆಗಾಲದಲ್ಲಿ ಸೇತುವೆ ಕಾಮಗಾರಿಯ ಸ್ಥಳದಲ್ಲಿ ಅತಿಯಾದ ಮಳೆಯಿಂದಾಗಿ ನೀರಿನ ಮಟ್ಟ ಹೆಚ್ಚಾಗಿದ್ದುದರಿಂದ ಕಾಮಗಾರಿಯ ವಿಳಂಬಕ್ಕೆ ಕಾರಣವಾಗಿರುತ್ತದೆ.<br>5. ಅತೀ ಹೆಚ್ಚು ನೀರಿನ ಮಟ್ಟಕ್ಕೆ ಸೇತುವೆಯ ವಿನ್ಯಾಸದ ಮಾರ್ಪಡಿನಿಂದ ಸದರಿ ಭಾಗದಲ್ಲಿ ಸೇತುವೆ ಕಾಮಗಾರಿಯ ಪ್ರಗತಿಯು ಕುಂಠಿತವಾಗಿರುತ್ತದೆ.<br>6. ಕೋವಿಡ್–19 ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ 2020 ಮತ್ತು 2021ನೇ ಸಾಲಿನಲ್ಲಿ ಲಾಕ್–ಡೌನ್ ನಿಂದಾಗಿ ಸರಕು, ಸಾಮಗ್ರಿ ಮತ್ತು ಕಟ್ಟಡ ನಿರ್ಮಾಣ ಕಾರ್ಮಿಕರ ಕೊರತೆಯಿಂದಾಗಿ ಕಾಮಗಾರಿಯನ್ನು ನಿಗಧಿತ ಕಾಲಾವಧಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. |

ಸಂಖ್ಯೆ:ಲೋಇ 212 ಇಎಪಿ 2025

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು